ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 1

ಸಂಖ್ಯೆ: ಇ-ಆಡಳಿತ ಶಿಕ್ಷಕರ ಮಾಹಿತಿ 01/2017-18 ದಿನಾಂಕ: 24.06.2017

**ಜರೂರು**

## ಸುತ್ತೋಲೆ

ವಿಷಯ: **Teacher's Data Capture Software** ತಂತ್ರಾಂಶದಲ್ಲಿ ಅಳವಡಿಸಿರುವ ಮಾಹಿತಿಯನ್ನು ದೃಡೀಕರಿಸಿ ನೀಡುವ ಬಗ್ಗೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸೇವಾ ಮಾಹಿತಿಗಳನ್ನು ತಂತ್ರಾಂಶದಲ್ಲಿ ಅಳವಡಿಸುವ ಕಾರ್ಯವು ಅಂತಿಮ ಹಂತದಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸಂಬಂದಪಟ್ಟ ಡಿಡಿಓಗಳು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಶಿಕ್ಷಕರ ಮಾಹಿತಿಯನ್ನು ತಂತ್ರಾಂಶದಲ್ಲಿ ತುಂಬಲಾಗಿರುತ್ತದೆ ಎಂದು ದೃಡೀಕರಣ ನೀಡತಕ್ಕದ್ದು. ಇದಕ್ಕಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಲಾಗಿನ್‌ನ Reports Tab ಅಡಿಯಲ್ಲಿ ಸದರಿ D.D.O wise Report ನೀಡಲಾಗಿರುತ್ತದೆ. ಈ ವರದಿಯಲ್ಲಿ ತಾಲ್ಲೂಕಿನ ವ್ಯಾಪ್ತಿಯಲ್ಲಿರುವ ಎಲ್ಲಾ ಸಂಬಳ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳಿಗೆ (D.D.O's) ಸಂಬಂದಿಸಿದ ಎಲ್ಲಾ ಶಿಕ್ಷಕರವಾರು ಮಾಹಿತಿಯು ಲಭ್ಯವಿರುತ್ತದೆ. ಸದರಿ ವರದಿಯನುಸಾರವಾಗಿ ಪ್ರತೀ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ಕಛೇರಿಯ ವ್ಯಾಪ್ತಿಯ ಶಿಕ್ಷಕರ ಮಾಹಿತಿ ಹಾಗೂ ತಮ್ಮ ಬ್ಲಾಕಿನ ವ್ಯಾಪ್ತಿಯಲ್ಲಿರುವ ಎಲ್ಲಾ ಡಿಡಿಓಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶಿಕ್ಷಕರ ಪಟ್ಟಿಯನ್ನು ಮುದ್ರಿಸಿ. ವರದಿಯ ಪ್ರತಿಯನ್ನು ಸಂಬಂದಪಟ್ಟ ಸಂಬಳ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳಿಗೆ ನೀಡಿ ಪ್ರತಿ ಶಿಕ್ಷಕರ ಸೇವಾ ಮಾಹಿತಿಯು ಸರಿಯಾಗಿರುವ ಬಗ್ಗೆ ದೃಡೀಕರಣವನ್ನು ಪಡೆದು. ತಮ್ಮ ಸಹಿಯೊಂದಿಗೆ ದೃಡೀಕರಿಸಿ. ಸದರಿ ಪ್ರತಿಯನ್ನು Sprial Bind ಮಾಡಿ ತಮ್ಮ ಉಪನಿರ್ದೇಶಕರ ಮೂಲಕ. ಇ-ಆಡಳಿತ ಶಾಖೆ. ಆಯುಕ್ತರ ಕಛೇರಿಗೆ ಇವರಿಗೆ **ದಿನಾಂಕ: 28.06.2017** ರೊಳಗೆ ತಲುಪಿಸತಕ್ಕದ್ದು. ವರದಿಯಲ್ಲಿ ಯಾವುದಾದರೂ ತಪ್ಪುಗಳಿದ್ದಲ್ಲಿ ದೃಡೀಕರಣದ ಕೊನೆಯಲ್ಲಿ ನೀಡಿರುವಂತೆ ದೃಡೀಕರಿಸತಕ್ಕದ್ದು. **ತಪ್ಪು ಮಾಹಿತಿಯನ್ನು ನೀಡಿದಲ್ಲಿ, ಅಂತಹ ಕ್ಷೇತ್ರಶಿಕ್ಷಣಾಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ಈ ಮೂಲಕ ತಿಳಿಸಿದೆ.**

(ಎಸ್.ಕಾತ್ಯಾಯನಿದೇವಿ)
ಜಂಟಿ ನಿರ್ದೇಶಕರು (ಆಡಳಿತ)

ಇವರಿಗೆ

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.